ಅದು ಮುಂದುವರಿಯಲಿ, ಅದನ್ನು ಮುಗಿಸಿಬಿಟ್ಟು ಬೇಕಾದರೆ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿ ಎಂದು ಸಲಹೆ ಕೊಟ್ಟಿದ್ದಾರೆ. ಆದಷ್ಟು ಬೇಗ ಇದನ್ನು ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ : 92 (58)

ಶ್ರೀ ಕೆ.ವಿ. ರವೀಂದ್ರನಾಥಬಾಬು : ಇದು ಮೈನರ್ ಇರಿಗೇಷನ್‌ಗೆ ಬರುತ್ತದೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು): ಅಧ್ಯಕ್ಷರೇ, ಇದು ಕಮ್ಯುನಿಕೇಷನ್ ಅಂಡ್ ಬಿಲ್ಡಿಂಗ್ಸ್‌ಗೆ ಬರುತ್ತದೆ.

ಅಧ್ಯಕ್ಷರು : ಇದು ಕಮ್ಯುನಿಕೇಷನ್ ಅಂಡ್ ಬಿಲ್ಡಿಂಗ್ಸ್‌ಗೆ ಬರುತ್ತದೆಯಂತೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಅಧ್ಯಕ್ಷರೇ, ಇದು ಮೈನರ್ ಇರಿಗೇಷನ್‌ಗೆ ಬರುತ್ತದೆ. ಏಕೆಂದು ಹೇಳಿದರೆ, ಸಣ್ಣಬೊಮ್ಮನಹಳ್ಳಿ ಪ್ರಾಜೆಕ್ಟ್ ಎಂದು ಹೇಳಿ ಅದು ಕಮ್ಯಾಂಡ್ ಏರಿಯಾದಲ್ಲಿ ಬರತಕ್ಕಂಥದ್ದು. ಆದ್ದರಿಂದ ಇದು ಮೈನರ್ ಇರಿಗೇಷನ್‌ನಲ್ಲಿಯೇ ಬರುತ್ತದೆ. ಅವರು ಈ ಬ್ರಿಡ್ಜಸ್ ಕಟ್ಟಿಸಬೇಕಾಗಿದೆ. ಇದುವರೆಗೂ ಈ ಒಂದು ಕನ್‌ಫ್ಯೂಷನ್‌ನಲ್ಲಿಯೇ 47 ವರ್ಷಗಳಿಂದಲೂ ಪೆಂಡಿಂಗ್ ಇದೆ. ಅಲ್ಲಿ ಪರಿಸ್ಥಿತಿ ಅಷ್ಟೇನೂ ಚೆನ್ನಾಗಿಲ್ಲ. ಆ ವಿಲೇಜರ್ಸ್ ತಿಮ್ಮನಹಳ್ಳಿಯಿಂದ ಧಾಟಿ ಹೋಗಬೇಕಾದರೆ ಆ ಹಳ್ಳದ ನಾಲ್ಕು ಅಡಿ ನೀರಿನಲ್ಲಿ ದಾಟಿ ಹೋಗಬೇಕು. ಯಾವ ಒಂದು ಕೆಲಸಕ್ಕೆ ಹೋಗಬೇಕಾದರೆ ಮತ್ತು ಬರಬೇಕಾದರೂ ಅವರು ನೀರನ್ನು ದಾಟಿ ಹೋಗಬೇಕು. ಅಲ್ಲಿ ಬಸ್ ಕೂಡಾ ಇಲ್ಲ. ಆ ರೀತಿ ಇರುವಾಗ ಅಲ್ಲಿನ ಹೆಣ್ಣುಮಕ್ಕಳ ಪರಿಸ್ಥಿತಿ ಏನು ಎನ್ನುವುದನ್ನು ನೀವೇ ನೋಡಬೇಕು. ಅಲ್ಲಿ ಕ್ರಾಸ್ ಮಾಡಿ ಹಳ್ಳವನ್ನು ನಾಲ್ಕು ಅಡಿ ನೀರಿನಲ್ಲಿ ಹೋಗಬೇಕಾದರೆ ಅವರು ಹೇಗೆ ಹೋಗಬೇಕು. ಅವರ ಪರಿಸ್ಥಿತಿಯೇನು? ನೀರು ಯಾವತ್ತೂ ಅಲ್ಲಿರುತ್ತದೆ. ಅದು ಡ್ಯಾಮ್ . ಸಣ್ಣಬೊಮ್ಮನಹಳ್ಳಿ ಪ್ರಾಜೆಕ್ಟ್ ಏರಿಯಾ ಅದು. ಕಮ್ಯಾಂಡ್ ಏರಿಯಾದಲ್ಲಿ ಬರತಕ್ಕಂಥದ್ದು. ಅದು ಮೈನರ್‌ಇರಿಗೇಷನ್‌ನಲ್ಲಿಯೇ ಬರುತ್ತದೆ. ನಾನು ಅದನ್ನು ಅದರಲ್ಲಿಯೇ ಇನ್‌ಕ್ಲೂಡ್ ಮಾಡುವುದಕ್ಕೆ ಕೂಡಾ ಕೊಟ್ಟಿದ್ದೇನೆ.

ಅಧ್ಯಕ್ಷರು : ಸರಿ ಅದನ್ನು ನೋಡಿಸಿ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಅದನ್ನು ಸಿ.ಅಂಡ್.ಬಿ.ಗೆ ಕಳಿಸಿದ್ದೇವೆ. ಆದರೂ ನಾನು ಇದನ್ನು ಪರಿಶೀಲನೆ ಮಾಡಿಸುತ್ತೇನೆ.

ಅಧ್ಯಕ್ಷರು : ಅದು ನಿಮಗೇ ಬಂದಿದೆ, ನೆಕ್ಸ್ಟ್ ವೀಕ್‌ಗೆ ಇದು ಬರುತ್ತದೆ.

ನಕ್ಸಲೈಟ್ ಚಟುವಟಿಕೆ ಹೆಚ್ಚುತ್ತಿರುವುದು

820 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಗೃಹ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಕ್ಸಲೈಟ್‌ಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಅವುಗಳನ್ನು ತಡೆಗಟ್ಟಲು ಸರ್ಕಾರದವರು ಕಾರ್ಯಗಳನ್ನೇನಾದರೂ ಯೋಚಿಸಿದ್ದಾರೆಯೇ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು)

ಅ) ಇಲ್ಲ

ಆ) ಹೌದು.

1) ಇಂತಹ ಪ್ರದೇಶಗಳಲ್ಲಿ ಆಧ್ಯತೆ ಮೇರೆಗೆ ಹಲವಾರು ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಸರ್ಕಾರ ರೂಪಿಸಿದೆ.

2) ಈ ಹಾವಳಿಯನ್ನು ತಡೆಗಟ್ಟಲು ರೂ. 7,62,230-00 ವೆಚ್ಚದಲ್ಲಿ ವಿಶೇಷ ಅರಕ್ಷಕ ಘಟಕ (ದಳ)ವನ್ನು ರಚಿಸಲು ಯೋಜಿಸಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹಸಚಿವರು ಇತ್ತೀಚೆಗೆ ಒಂದು ಪತ್ರಿಕಾ ಹೇಳಿಕೆಯಲ್ಲಿ ರಾಜ್ಯದಲ್ಲಿ ನಕ್ಸಲೈಟ್ಸ್ ಹಾವಳಿ ಹೆಚ್ಚಾಗಿದೆ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ಆದರೆ ಇಲ್ಲಿ ತಮ್ಮ ಉತ್ತರದಲ್ಲಿ 'ಇಲ್ಲ' ಎಂದು ಹೇಳಿದ್ದಾರೆ. ಅದು "ಇಲ್ಲ" ಎಂದರೆ ನನಗೆ ಬಹಳ ಸಂತೋಷ. ನನಗೆ ಗೊತ್ತಿರುವ ಹಾಗೆ ನಕ್ಸಲೈಟ್ಸ್ ಚಟುವಟಿಕೆ ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಬಹಳ ಜಾಸ್ತಿಯಾಗಿದೆ. ಪಶ್ಚಿಮ್ಯಾಲರ್ಲಿ ಆಂಧ್ರ ಬಾರ್ಡರ್‌ನಲ್ಲಿರತಕ್ಕಂಥ ಏರಿಯಾಗಳಲ್ಲಿ ಬಹಳ ಜಾಸ್ತಿಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ನಾನಾದರೂ ಕೇಳತಕ್ಕಂಥದ್ದು ಏನೆಂದರೆ, ಈ ಬಾರ್ಡರ್ ಏರಿಯಾ ತಾಲ್ಲೂಕುಗಳಲ್ಲಿ ನೀವು ಸರ್ಕಲ್ ಇನ್ಸ್‌ಪೆಕ್ಟರ್‌ಗಳನ್ನು ಪೋಸ್ಟ್ ಮಾಡತಕ್ಕಂಥ ಕಾಲದಲ್ಲಿ ಪೊಲ್ಟಿಕಲ್ ಪ್ರೆಷರ್ಸ್‌ಗೆ ಯೀಲ್ಡ್ ಆಗದೇ ಎಫಿಸಿಯೆಂಟ್ ಆಫೀಸರ್‌ಗಳನ್ನು ಅಲ್ಲಿಗೆ ಪೋಸ್ಟ್ ಮಾಡಲಿಕ್ಕೆ ಆಗುತ್ತದೆಯೇ ಎನ್ನತಕ್ಕಂಥದ್ದು ಒಂದು. ಎರಡನೆಯದು ಎಂದರೆ ಸ್ಪೆಷಲ್ ಸ್ಕಾಡ್ ಮಾಡುತ್ತೇವೆ, 7.62 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದ್ದೀರಿ. ಈ ಸ್ಪೆಷಲ್ ಸ್ಕಾಡ್‌ನ್ನು ಒಬ್ಬ ಐ.ಜಿ.ಲೆವೆಲ್ ಆಫೀಸರ್‌ನ್ನು ಹೆಡ್ ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಇದು ಸಾಧ್ಯವೇ?

ಶ್ರೀ ಆರ್. ಧರ್ಮಸಿಂಗ್ (ಮಾನ್ಯ ಗೃಹಸಚಿವರು): ಈಗಾಗಲೇ ಈ ನೆಕ್ಸಲೈಟ್ಸ್ ಆಕ್ಟಿವಿಟೀಸ್‌ಗಳನ್ನು ತಡೆಯತಕ್ಕಂಥ ರೀತಿಯಲ್ಲಿ ಸರ್ಕಾರದಿಂದ ಕ್ರಮ ತೆಗೆದುಕೊಂಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಇತ್ತೀಚೆಗೆ ದಿನಗಳಲ್ಲಿ ಸ್ವಲ್ಪ ಹೆಚ್ಚಾಗುತ್ತಿಲ್ಲ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಮೊನ್ನೆ ಪಾವಗಡ ತಾಲ್ಲೂಕಿನಲ್ಲಿ ತಿರುವಣೆಯಲ್ಲಿ ಕೂಡಾ ಹೋಗಿ ಭೇಟಿಯಾಗಿ ಅಲ್ಲಿರತಕ್ಕಂಥ ಜನರ ಜೊತೆಯಲ್ಲಿ ಮಾತನಾಡಿ ಬಂದಿದ್ದೇನೆ. They are fighting with socio-economic ಪ್ರಾಬ್ಲಮ್. ಆಂಧ್ರಪ್ರದೇಶ ಬಾರ್ಡರ್‌ನಲ್ಲಿ 1948 ತೆಲಂಗಾಣ ಮೂವ್‌ಮೆಂಟ್ ಇತ್ತಲ್ಲ, ಅದಕ್ಕೆ ಪ್ರತ್ಯುತ್ತರವಾಗಿ ಈ ರೀತಿಯಾಗುತ್ತಿದೆ. ಮೊನ್ನೆ ನಾನು ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡತಕ್ಕಂಥ ಕಾಲದಲ್ಲಿ ನಮ್ಮಲ್ಲಿ ನಕ್ಸಲೈಟ್ಸ್ ಆಕ್ಟಿವಿಟೀಸ್, ರೆಡಿಕ್ಯುಲ್ ಆಕ್ಟಿವಿಟೀಸ್ ನಿಮ್ಮಲ್ಲಿಯೂ ಕೂಡಾ ಪ್ರಾರಂಭವಾಗುತ್ತದೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಅದನ್ನು ನಾನು ಪತ್ರಿಕೆಯಲ್ಲಿ ಕೂಡಾ ಹೇಳಿದ್ದೇನೆ. ಆಂಧ್ರದಿಂದ ಬರತಕ್ಕಂಥ ಈ ನಕ್ಸಲೈಟ್ಸ್‌ಗಳಿಂದ ಈ ರೆಡಿಕ್ಯುಲ್ ಆಕ್ಟಿವಿಟೀಸ್ ಪ್ರಾರಂಭವಾಗುತ್ತಿದೆ. ಕೋಲಾರದಲ್ಲಿ, ರಾಯಚೂರಿನಲ್ಲಿ, ಬಳ್ಳಾರಿಯಲ್ಲಿ ಮತ್ತು ಪಾವಗಡ ಮತ್ತು ಗುಲ್ಬರ್ಗಾ ಜಿಲ್ಲೆಯ, ಕೊಂಚಾವರ್ಮ್ ಏರಿಯಾದಲ್ಲಿ ಕೂಡಾ ಪ್ರಾರಂಭವಾಗುತ್ತಿದೆ. ಬೀದರ್‌ನಲ್ಲಿ ಕೂಡಾ ಸ್ವಲ್ಪ ಇದೆ ಒಮ್ಮೆ ಅಲ್ಲಿಯೂ ಅಂದರೆ ಬೀದರ್‌ನಲ್ಲಿ ಕೂಡಾ ರೆಡಿಕ್ಯುಲ್ ಆಕ್ಟಿವಿಟೀಸ್ ಪ್ರಾರಂಭವಾಗಿ ಬಿಟ್ಟಿದೆ. ಇಲ್ಲಿಂದ ಮತ್ತೆ ಬೇರೆ ಕಡೆಗೆ ಹರಡತಕ್ಕಂಥದ್ದು ಕೂಡ ಬರಬಹುದು. ಅದಕ್ಕಾಗಿ ಸರ್ಕಾರ ಅಭಿವೃದ್ಧಿ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದಿದ್ದೇವೆ. ಪಾವಗಡ ಮತ್ತು ಚಿಂಚೋಳಿ ತಾಲ್ಲೂಕಿನ ಕೊಂಚಾವರ್ಮ್‌ನಲ್ಲಿ ಕೂಡಾ ಪ್ರಾರಂಭಮಾಡಿದ್ದೇವೆ. ಮತ್ತು ಎನ್.ಟಿ.ಸ್ಕಾಡ್, ನಕ್ಸಲೈಟ್ಸ್ ಸ್ಕಾಡ್‌ಗೆ ಒಂದು ಡಿ.ಬಿ.ಪಿ. ಅವರ ನೇತೃತ್ವದಲ್ಲಿ ಮಾಡಬೇಕು ಎನ್ನತಕ್ಕಂಥ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಈಗ ಎಸ್.ಪಿ, ಡಿ.ಐ.ಜಿ. ಯವರು ಅಲ್ಲಿ ಪ್ರತ್ಯೇಕವಾಗಿ ಪ್ರತಿ ಜಿಲ್ಲೆಯಲ್ಲಿ ತಿರುವಣ್ಣದಲ್ಲಿ ಒಂದು ಪೋಲೀಸ್ ಸ್ಟೇಷನ್ ಖಾಯಂ ಮಾಡಿದ್ದೇವೆ, ಪಾವಗಡ ತಾಲ್ಲೂಕಿನಲ್ಲಿ, ಪಂಚಾವರಂನಲ್ಲೂ ಪೋಲೀಸ್ ಸ್ಟೇಷನ್ ಮಾಡಿದ್ದೇವೆ ನಕ್ಸಲೈಟ್ ಹಾವಳಿ ಇರುವಂಥ ಕೋಲಾರ, ರಾಯಚೂರು, ಬಳ್ಳಾರಿಗಳಲ್ಲಿ ಆರ್ಗನೈಸೇಷನ್ ಸೆಲ್ ಕೂಡ ಪ್ರಾರಂಭ ಮಾಡಿದ್ದೇವೆ. ಇನ್ನು ಗದ್ದಾರುವಿನ ಸಮಸ್ಯೆ ಏನಿದೆ, ಅದನ್ನು ಬಹಳ ಪ್ರಾಮಾಣಿಕವಾಗಿ ಜನರ ಮನಸ್ಸಿಗೆ ಹಿಡಿಸುವಂತೆ ಎಲ್ಲರೂ ಕೂಡಾ ಪ್ರಾಪಗೇಟ್ ಮಾಡುತ್ತಿದ್ದಾರೆ. ನಾವು ಅದನ್ನು ಅವಾಯ್ಡ್ ಮಾಡುವುದಕ್ಕೆ, ಆ

ಪ್ರಾಬ್ಲಮ್‌ನ್ನು ಸಾಲ್ವ್ ಮಾಡುವುದಕ್ಕೆ ಬಾರ್ಡರ್ ಡೆವೆಲಪ್‌ಮೆಂಟ್ ಪ್ರೊಗ್ರಾಮ್ ಕೂಡ ಮಾಡಿದ್ದೇವೆ. ಈಗಾಗಲೇ ತಿರುವಣ್ಣದಲ್ಲಿ 85 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ. ಈ ಪ್ರದೇಶಕ್ಕೆ ಎಂ.ಪಿ. ಮತ್ತು ಎಂ.ಎಲ್.ಎ.ಗಳ ಜೊತೆ ಭೇಟಿ ನೀಡಿದ್ದೇವೆ. ನಕ್ಸಲೈಟ್ ಆಕ್ಟಿವಿಟಿ ಬರುವಂಥ ಪ್ರದೇಶದಲ್ಲಿ ಬಾರ್ಡರ್ ಡೆವೆಲಪ್‌ಮೆಂಟ್ ಪ್ರೊಗ್ರಾಮ್ ಬಗ್ಗೆ ಸಹ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಅದಕ್ಕೆ ಸರ್ಕಾರ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಪ್ರಶ್ನೆ ಕೇಳಿದ ಮುಖ್ಯ ಹಿನ್ನೆಲೆಯ ಬಗ್ಗೆ ಒಂದು ಉಪ ಪ್ರಶ್ನೆಯನ್ನು ಕೇಳುತ್ತೇನೆ. ಇತ್ತೀಚೆಗೆ ಗದ್ದಾರ್‌ರವರು ಬೀದರ್‌ಗೆ ಬಂದಿದ್ದಾಗ ಅವರನ್ನು ರಾಜ್ಯದಿಂದ ಗಡಿಪಾರು ಮಾಡಿ, ಕಾರ್ಯಕ್ರಮವನ್ನು ನಿಲ್ಲಿಸಬಾರದೆಂದು ಸರ್ಕಾರ ಹೇಳಿ ಕ್ರಮ ತೆಗೆದುಕೊಂಡಿತು. ಇದರಿಂದ ಏನಾಯಿತು ಎಂದರೆ, ಅನಾವಶ್ಯಕವಾಗಿ ಅವರಿಗೆ ಇಂಪಾರ್ಟೆನ್ಸ್ ಕೊಟ್ಟು ಈ ತರಹದ ಆಕ್ಟಿವಿಟೀಸ್ ಹೆಚ್ಚು ಆಗುವುದಕ್ಕೆ ಕಾರಣವಾಯಿತು ಎಂದು ನನ್ನ ಅಭಿಪ್ರಾಯ. ಆದ್ದರಿಂದ ರಾಜ್ಯ ಸರ್ಕಾರದಿಂದ ಆಂಧ್ರ ಪ್ರದೇಶದ ಮುಖ್ಯ ಮಂತ್ರಿಗಳನ್ನು ಮತ್ತೆ ಸಂಬಂಧಪಟ್ಟ ಗೃಹ ಮಂತ್ರಿಗಳ ಜೊತೆ ಮಾತುಕತೆಯನ್ನು ನಡೆಸಿದ್ದೀರಾ? ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸಂಪರ್ಕವನ್ನು ಇಟ್ಟುಕೊಂಡಿದೆಯೇ ಎಂದು ಕೇಳಬಯಸುತ್ತೇನೆ. ಪ್ರೈವೇಟಾಗಿ ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ಮುಖ್ಯವಾಗಿ ಆಂಧ್ರ ಸರ್ಕಾರದ ಜೊತೆ ಮಾತುಕತೆ ನಡೆಸಿದ್ದೀರಾ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ : ಆ ರಾಜ್ಯದ ಪೋಲೀಸ್ ಕಮೀಷನರ್ ಹಾಗೂ ಡಿ.ಐ.ಜಿ. ಇವರುಗಳೊಡನೆ ನಮ್ಮ ರಾಜ್ಯದ ಅಧಿಕಾರಿಗಳು ಈ ಬಗ್ಗೆ ಮಾತುಕತೆಯಾಡಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಅಲ್ಲಿನ ಮುಖ್ಯ ಮಂತ್ರಿಯವರಿಗೆ ಪತ್ರವನ್ನು ಬರೆದಿದ್ದೇವೆ. ಹಾಗೂ ಇದರ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ.

ಕೊಳ್ಳೇಗಾಲದ ಟೌನ್‌ನಲ್ಲಿ ಹರಿಜನ ಗಿರಿಜನರ ವಿದ್ಯಾರ್ಥಿನಿಲಯ ನಿರ್ಮಿಸುವ ಬಗ್ಗೆ.

151 - ಶ್ರೀ ಎಂ. ಸಿದ್ಧಮಾದಯ್ಯ (ಕೊಳ್ಳೇಗಾಲ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದ ಪಟ್ಟಣದಲ್ಲಿರುವ ಶ್ರೀ ಮಹದೇಶ್ವರ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹಿಂದಿನ ಸರ್ಕಾರವು ಸದರೀ ವಿದ್ಯಾರ್ಥಿನಿಲಯವನ್ನು ನಿರ್ಮಿಸುವ ಬಗ್ಗೆ ಆಯವ್ಯಯದಲ್ಲಿ ಸೇರಿಸಿದಾಗ್ಯೂ ಸಹ ಅದನ್ನು ಕೈಬಿಟ್ಟಿರಲು ಕಾರಣವೇನು?

ಇ) ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲವುಂಟಾಗಿರುವುದರಿಂದ ತಕ್ಷಣ ಈ ಕಾರ್ಯವನ್ನು ಕೈಗೊಳ್ಳಲಾಗುವುದೇ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):

ಅ) ಹೌದು

ಆ) ಹಿಂದಿನ ಸರ್ಕಾರವು ಈ ವಿದ್ಯಾರ್ಥಿನಿಲಯ ಕಟ್ಟಡದ ನಿರ್ಮಿಸುವ ಬಗ್ಗೆ ಆಯವ್ಯಯದಲ್ಲಿ ಸೇರಿಸಿಲ್ಲ.

ಇ) 1991-92ನೇ ಸಾಲಿನಲ್ಲಿ ಈ ಕಟ್ಟಡದ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಂ. ಸಿದ್ಧಮಾದಯ್ಯ : ಕೊಳ್ಳೇಗಾಲದಲ್ಲಿ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕಟ್ಟುವುದಕ್ಕೆ 1986-87ರಲ್ಲೇ ಸ್ಯಾಂಕ್ಷನ್ ಆಗಿರುವುದನ್ನು ನಿಮ್ಮ ಇಲಾಖೆಯವರು ಕ್ಯಾನ್ಸಲ್ ಮಾಡಿ, ಅಲ್ಲಿ ಕಟ್ಟಡವನ್ನು ಕಟ್ಟಿಸದೇ ಇರುವುದಕ್ಕೆ ಕಾರಣವೇನು?